ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 05-12-1978.

# *ಮರುಜೀವಾ ಜನ್ಮದ ನಿಜಸಂಸ್ಕಾರ- ಮೊದಲ ಸ್ಮೃತಿ ಮತ್ತು ಮೊದಲ ಮಾತು*

(मरजीवा जन्म का निजी संस्कार- पहली स्मृति और पहला बोल)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸರ್ವಾತ್ಮರ ಮೇಲೆ ದಯೆಯನ್ನುಡುವವರು, ವಿಶ್ವದಲ್ಲಿರುವ ಸರ್ವಶ್ರೇಷ್ಠ ಆತ್ಮರೊಂದಿಗೆ ಬಾಪ್‌ದಾದಾ ಮಾತನಾಡುತ್ತಿದ್ದಾರೆ.**

ಇಂದು ಬಾಪ್‌ದಾದಾರವರು ವಿಶ್ವದ ಸರ್ವಶ್ರೇಷ್ಠ ಅತ್ಮರನ್ನು ನೋಡಿ ಹರ್ಷಿತವಾಗುತ್ತಿದ್ದಾರೆ. ಸರ್ವ ಆತ್ಮರಲ್ಲಿಯೂ ಸಹ ಬಹಳ ಸ್ವಲ್ಪ ಆತ್ಮರದು ಇಂತಹ ಶೇಷ್ಠ ಭಾಗ್ಯವಿದೆ – ಹೇಗೆ ಮಕ್ಕಳು ಭಾಗ್ಯವಿದಾತ ತಂದೆಯನ್ನು ನೋಡಿ ಹರ್ಷಿತವಾಗುತ್ತಾರೆಯೋ ಹಾಗೆಯೇ ತಂದೆಯೂ ಸಹ ಭಾಗ್ಯವಂತ ಮಕ್ಕಳನ್ನು ಪಡೆದು, ಮಕ್ಕಳಿಗಿಂತಲೂ ಹೆಚ್ಚು ಖುಷಿ ಪಡುತ್ತಾರೆ. ಏಕೆಂದರೆ ಇಷ್ಟೊಂದು ಸಮಯದಿಂದ ಮತ್ತು ಇಷ್ಟೆಲ್ಲಾ ಅಗಲಿರುವ ಮಕ್ಕಳು ಮತ್ತೆ ಮಿಲನವಾಗಿ ಬಿಡುತ್ತಾರೆಂದರೆ ಖುಷಿಯೇಕೆ ಆಗುವುದಿಲ್ಲ! ತಂದೆಯು ಪ್ರತಿಯೊಂದು ಮಗುವಿನ ವಿಶೇಷತೆ ಅಥವಾ ಪ್ರತಿಯೊಂದು ನಕ್ಷತ್ರದ ಹೊಳಪು, ಪ್ರತಿಯೊಂದು ಆತ್ಮನರಂಗು, ಆತ್ಮೀಯತೆಯ ಈಶ್ವರೀಯ ಹೊಳಪನ್ನು ಎಷ್ಟು ತಿಳಿದಿದ್ದಾರೆಯೋ, ಅದನ್ನು ಮಕ್ಕಳು ಕೆಲವೊಮ್ಮೆ ಅಷ್ಟೇ ಮರೆತು ಹೋಗುತ್ತಾರೆ. ಸೆಕೆಂಡಿನಲ್ಲಿ ಸರ್ವ ವಿಘ್ನಗಳಿಂದ, ಸರ್ವ ಪ್ರಕಾರದ ಪರಿಸ್ಥಿತಿಗಳಿಂದ ಅಥವಾ ತಮೋಗುಣಿ ಪ್ರಕೃತಿಯ ಆಪತ್ತುಗಳಿಂದ ವಿಜಯಿಯಾಗುವುದಕ್ಕಾಗಿ- ಕೇವಲ ಒಂದು ಮಾತಿನ ನಿಶ್ಚಯ ಮತ್ತು ನಶೆಯಲ್ಲಿರಿ ಅದು ಯಾವುದು? ಯಾವುದನ್ನು ಮತ್ತೆ-ಮತ್ತೆ ತಿಳಿದುಕೊಳ್ಳುತ್ತಿರುತ್ತೀರಿ, ಸಂಕಲ್ಪದವರೆಗೂ ಸ್ಮೃತಿಯಲ್ಲಿರುತ್ತೀರಿ ಆದರೆ ಸಂಸ್ಕಾರರೂಪದಲ್ಲಿ ಇರುವುದಿಲ್ಲ- ಯೋಚನೆಯೂ ಮಾಡುತ್ತೀರಿ, ತಿಳಿದುಕೊಂಡಿರುತ್ತೀರಿ, ಕೇಳುತ್ತಿರುತ್ತೀರಿ, ಆದರೂ ಸಹ ಕೆಲಕೆಲವೊಮ್ಮೆ ಮರೆತುಹೋಗುತ್ತೀರಿ. ಅದು ಏನಾಗಿದೆ? ಬಹಳ ಹಳೆಯ ಮಾತಾಗಿದೆ ವಾಹ್ ನಾನಾತ್ಮನೇ! ಎನ್ನುವುದನ್ನು ಕೇಳುತ್ತಾ ಖುಷಿಯಾಗುತ್ತಾ ಇರುತ್ತೀರಿ, ಆದರೂ ಮರೆತುಹೋಗುತ್ತೀರಿ. ಈ ಮರುಜೀವಾ ಜನ್ಮದ ಸಂಸ್ಕಾರ- ವಾಹ್ ನಾನಾತ್ಮ! ಅಂದಮೇಲೆ ತಮ್ಮ ಜನ್ಮದ ನಿಜಸಂಸ್ಕಾರವು ಜನ್ಮದ ಮೊದಲ ಸ್ಮೃತಿ, ಜನ್ಮದ ಮೊದಲ ಮಾತು- ನಾನು ಶ್ರೇಷ್ಠ ಬ್ರಾಹ್ಮಣಾತ್ಮನಾಗಿದ್ದೇನೆ ಎಂಬುದನ್ನೂ ಮರೆತುಹೋಗುತ್ತೀರಿ. ಮರೆಯುವ ಆಟವು ಇಷ್ಟವಾಗುತ್ತದೆ.

ಅರ್ಧಕಲ್ಪವನ್ನು ಮರೆಯುವ ಆಟದಲ್ಲಿ ಕಳೆದಿರಿ - ಈಗಲೂ ಇದೇ ಆಟವು ಇಷ್ಟವಾಗುತ್ತದೆಯೇ? ಬ್ರಾಹಣ ಅರ್ಥಾತ್ ಸ್ಮೃತಿ ಸ್ವರೂಪ, ಬ್ರಾಹ್ಮಣ ಅರ್ಥಾತ್ ಸಮರ್ಥ ಸ್ವರೂಪ, ಸ್ವರೂಪವನ್ನು ಮರೆಯುವುದು ಇದಕ್ಕೆ ಏನೆಂದು ಹೇಳುವುದು? ಬಾಪ್‌ದಾದಾರವರಿಗೆ ಮಕ್ಕಳ ಈ ಆಟವನ್ನು ನೋಡಿ ದಯೆಬರುತ್ತದೆ. ನಗು ಸಹ ಬರುತ್ತದೆ. ಇರುವುದು ಮಹಾನ್ ಆತ್ಮರು ಮತ್ತೆ ಮಾಡುವುದೇನು? ಇನ್ನೂ ಒಂದು ಬಹಳ ವಿಚಿತ್ರವಾದ ಆಟವನ್ನಾಡುತ್ತೀರಿ. ಯಾವುದಾಗಿದೆ? ಬಹಳ ಚೆನ್ನಾಗಿ ತಿಳಿದಿದ್ದೀರಿ- ಏನು ಮಾಡುತ್ತೀರೆನ್ನುವುದನ್ನು ತಾವೇ ಹೇಳಿರಿ – ಕೆಲವರು ತುಂಟಾಟ ಮಾಡುತ್ತಾರೆ, ಕೆಲವರು ಕಣ್ಣುಮುಚ್ಚಾಲೆ ಆಟವನ್ನಾಡುತ್ತಾರೆ. ಕೆಲವೊಮ್ಮೆ ವಾಹ್ ಹೇಳುತ್ತೀರಿ, ಕೆಲವೊಮ್ಮೆ ಅಯ್ಯೋ ಎನ್ನುತ್ತೀರಿ - ಇದನ್ನಂತು ಮಾಡುತ್ತೀರೆಂದು ಎಲ್ಲರೂ ಸಹ ಬಹಳ ಚೆನ್ನಾಗಿ ತಿಳಿದುಕೊಂಡಿದ್ದೀರಿ. ಇದಕ್ಕಿಂತಲೂ ವಿಚಿತ್ರವಾದ ಮತ್ತೊಂದು ಆಟವಿದೆ - ಅದೇನೆಂದರೆ ಯಾವಾಗ ಬಾಬಾರವರ ಮಕ್ಕಳಾದಿರಿ, ಮರುಜೀವಾ ಆದಾಗ ಮೊದಲು ಯಾವ ಪ್ರತಿಜ್ಞೆ ಮಾಡಿದಿರಿ? ಇದನ್ನೂ ಸಹ ಬಹಳ ಚೆನ್ನಾಗಿ ತಿಳಿದಿದ್ದೀರಿ. ಯಾವ ಪ್ರತಿಜ್ಞೆಯನ್ನು ಮಾಡಿದಿರಿ ಎಂಬುದನ್ನೂ ತಿಳಿದಿದ್ದೀರಿ. ತಂದೆಯು ಪ್ರತಿಜ್ಞೆಯನ್ನು ಮಾಡಿಸಿದರು ಮತ್ತು ತಾವು ಸ್ವೀಕಾರವನ್ನೂ ಮಾಡಿದಿರಿ. ಸ್ವೀಕಾರ ಮಾಡಿದನಂತರ ತಂದೆಯು ಹೇಳಿದರು. ಮತ್ತೇನು ಮಾಡುತ್ತೀರಿ! ಶೂದ್ರತ್ವದ ವಿಕಾರಿ ಸಂಸ್ಕಾರಗಳನ್ನು ಬಿಟ್ಟುಬಿಡಿ, ಆತ್ಮದ ವಿಕಾರಿ ಸಂಸ್ಕಾರವೆಂಬ ವಸ್ತ್ರವನ್ನು ಪರಿವರ್ತನೆ ಮಾಡಿದಿರಿ ಮತ್ತು ಈಶ್ವರೀಯ ಸಂಸ್ಕಾರದ ದಿವ್ಯ ವಸ್ತ್ರವನ್ನು ಧರಿಸಿದಿರಿ- ಶೂದ್ರತ್ವದ ಲಕ್ಷಣಗಳಾದ ಅಶುದ್ಧ ವೃತ್ತಿ ಮತ್ತು ದೃಷ್ಟಿಯನ್ನು ಪರಿವರ್ತನೆ ಮಾಡಿಕೊಂಡು, ಪವಿತ್ರ ದೃಷ್ಟಿ ಮತ್ತು ವೃತ್ತಿಯ ವಿಶೇಷ ಲಕ್ಷಣಗಳನ್ನು ಧಾರಣೆ ಮಾಡಿಕೊಂಡಿರಿ. ಸರ್ವ ಶ್ರೇಷ್ಠಾತಿ ಶ್ರೇಷ್ಠ ಸಂಬಂಧ ಮತ್ತು ಸಂಪತ್ತಿನ ಅಧಿಕಾರಿಗಳಾದಿರಿ. ಇದೂ ಸಹ ಬಹಳ ಚೆನ್ನಾಗಿ ನೆನಪಿದೆ. ಆದರೂ ಏನು ಮಾಡುತ್ತೀರಿ - ಯಾರು ಶ್ರೇಷ್ಠ ಆತ್ಮರಾಗಿರುತ್ತಾರೆಯೋ ಅವರು ಸಂಕಲ್ಪದಿಂದ ಬಿಟ್ಟಿರುವಂತಹ ಅರ್ಥಾತ್ ತ್ಯಾಗ ಮಾಡಿರುವಂತಹ ಮಾತನ್ನು ಪುನಃ ಧಾರಣೆ ಮಾಡುವುದಿಲ್ಲ. ಹೇಗೆ ರಾಯಲ್ ಮಕ್ಕಳು ಧರಣಿಯಲ್ಲಿ ಬಿದ್ದಿರುವ ಅಥವಾ ಬಿಸಾಡಿರುವ ವಸ್ತುವನ್ನೆಂದೂ ತೆಗೆದುಕೊಳ್ಳುವುದಿಲ್ಲ. ತಾವೆಲ್ಲರೂ ಸಂಕಲ್ಪವನ್ನು ಧಾರಣೆ ಮಾಡಿದಿರಿ ಮತ್ತು ಈ ವಿಕಾರವನ್ನು ಬುದ್ಧಿಯಿಂದ ಎಸೆಯಲಾಯಿತು. ಅದನ್ನು ವ್ಯರ್ಥವೆಂದು ತಿಳಿದು, ಹಾಳಾಗಿರುವ ವಸ್ತುವೆಂದು ತಿಳಿದು ಪ್ರತಿಜ್ಞೆಯನ್ನು ಮಾಡಿದಿರಿ ಮತ್ತು ತ್ಯಾಗವನ್ನು ಮಾಡಿದಿರಿ. ಮತ್ತೆ ಈ ವಿಷವನ್ನು ಸೇವನೆ ಮಾಡುವುದಿಲ್ಲ ಎಂದುವಚನವನ್ನು ತೆಗೆದುಕೊಳ್ಳಲಾಯಿತು, ಆದರೂ ಏನು ಮಾಡುತ್ತೀರಿ! ಬಿಸಾಡಿರುವ ವಸ್ತು, ಕೊಳಕಾಗಿರುವ ವಸ್ತು, ವ್ಯರ್ಥವಾಗಿರುವ ವಸ್ತು, ಸುಟ್ಟುಹೋಗಿರುವ ವಸ್ತುವನ್ನೇ ತೆಗೆದುಕೊಂಡು ಪುನಃ ಏಕೆ ಉಪಯೋಗ ಮಾಡುತ್ತೀರಿ? ಬುದ್ಧಿಹೀನತೆಯ ಯಾವ ಆಟವನ್ನು ಆಡುತ್ತೀರೆಂದು ತಿಳಿಯಿತೆ. ಆಟವನ್ನು ನೋಡುತ್ತಾ ದಯೆಯೂ ಬರುತ್ತದೆ ಮತ್ತು ನಗು ಸಹ ಬರುತ್ತದೆ. ಎಲ್ಲವನ್ನೂ ತಿಳಿದಿರುವವರಾಗಿದ್ದೀರಿ ಆದರೆ ಮಾಡುವವರಾಗಬೇಕು. ಈಗ ಏನು ಮಾಡುತ್ತೀರಿ? ಮಾಡುವವರಾಗುವ ವಿಶೇಷ ಕಾರ್ಯವನ್ನು ಮಾಡಿ ತೋರಿಸಿರಿ. ಸಂಕಲ್ಪದ ಮೂಲಕ ತ್ಯಾಗ ಮಾಡಿರುವಂತಹ ವ್ಯರ್ಥವಾದ ವಸ್ತುವನ್ನು, ಮತ್ತೆ ಸಂಕಲ್ಪದಲ್ಲಿಯೂ ಸ್ವೀಕರಿಸಬಾರದು. ಯೋಚನೆ ಮಾಡಿ ಮತ್ತು ಸ್ವಯಂನೊಂದಿಗೆ ಕೇಳಿಕೊಳ್ಳಿ ನಾನು ಯಾರಾಗಿದ್ದೇನೆ ಮತ್ತು ಏನು ಮಾಡುತ್ತಿದ್ದೇನೆ? ಯಾವ ಪ್ರತಿಜ್ಞೆಯನ್ನು ಮಾಡಿದೆನು ಮತ್ತು ಯಾವ ಕರ್ಮವನ್ನು ಮಾಡುತ್ತಿರುವೆನು? ಯಾವ ಪ್ರತಿಜ್ಞೆಯನ್ನು ಮಾಡಿದ್ದೇನೆ ಮತ್ತು ಏನನ್ನು ನಿಭಾಯಿಸುತ್ತಿದ್ದೇನೆ. ತಮ್ಮ ಸ್ವಮಾನ, ಶ್ರೇಷ್ಠ ಸ್ಮೃತಿ, ಶ್ರೇಷ್ಠ ಜೀವನದ ಸಮರ್ಥ ಸ್ವರೂಪರಾಗಿರಿ. ಹೇಳುವುದೇನು ಮತ್ತು ಮಾಡುವುದೇನಾಗಿದೆ? ಇಂತಹ ವಿಚಿತ್ರವಾದ ಆಟವನ್ನೀಗ ಬಂದ್ ಮಾಡಿಬಿಡಬೇಕು. ಶ್ರೇಷ್ಠ ಸ್ವರೂಪ, ಶ್ರೇಷ್ಠ ಪಾತ್ರಧಾರಿಯಾಗಿದ್ದು ಶ್ರೇಷ್ಠತೆಯ ಆಟವನ್ನಾಡಬೇಕು. ಇಂತಹ ಸಂಪೂರ್ಣ ಆಹುತಿಯ ಸಂಕಲ್ಪ ಮಾಡಿದಾಗ ಪರಿವರ್ತನಾ ಸಮಾರೋಹವಾಗುವುದು. ಈ ಸಮಾರೋಹದ ದಿನಾಂಕವನ್ನು ಸಂಘಟಿತರೂಪದಲ್ಲಿ ನಿಶ್ಚಿತಗೊಳಿಸಿರಿ. ಒಳ್ಳೆಯದು.

**ಇಂತಹ ದೃಡ ಸಂಕಲ್ಪಧಾರಿ, ಸಂಕಲ್ಪ ಮತ್ತು ಸ್ವರೂಪದಲ್ಲಿ ಸಮಾನ ಮೂರ್ತಿ, ತಿಳಿದಿರುವವರು ಮತ್ತು ಮಾಡುವವರು, ಪ್ರತೀ ಕರ್ಮದ ಮೂಲಕ ಸ್ವಯಂನ ಶ್ರೇಷ್ಠತೆ ಮತ್ತು ತಂದೆಯ ಪ್ರತ್ಯಕ್ಷತೆ ಮಾಡುವ ಸರ್ವಶ್ರೇಷ್ಠ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ದೀದಿಯವರೊಂದಿಗೆ ವಾರ್ತಾಲಾಪ:-** ತಂದೆಯು ಪ್ರತಿಯೊಂದು ಮಗುವಿನ ಕೂಗಿನ ಮೇರೆಗೆ ಬಂದು ಬಿಡುತ್ತಾರೆ. ಯಾವ ಆಜ್ಞೆಯನ್ನು ಮಾಡಲಾಗುತ್ತದೆಯೋ ಅದನ್ನು ಮಕ್ಕಳು ಒಪ್ಪುತ್ತಾರೆ ಆದರೆ ಈ ಬಾರಿ ಜೊತೆಯಲ್ಲಿಯೂ ತೆಗೆದುಕೊಂಡು ಹೋಗಬೇಕು. ಮಕ್ಕಳಂತು ಜೊತೆಯೇ ಇರುತ್ತಾರೆ ಆದರೆ ಜೊತೆಯಲ್ಲಿ ಏನನ್ನು ತೆಗೆದುಕೊಂಡು ಹೋಗುವಿರಿ? ಪ್ರತಿಯೊಂದು ಮಗುವಿನ ಧೃಡಸಂಕಲ್ಪದ ಅಂತಿಮ ಆಹುತಿಯನ್ನು ತೆಗೆದುಕೊಂಡು ಹೋಗುವಿರಿ. ಯಜ್ಞದ ಪ್ರಸಾದವು ಅಂತಿಮ ಆಹುತಿಯದಾಗಿರುತ್ತದೆ. ಸಾಕಾರನ ಮೂಲಕ ಯಜ್ಞದ ರಚನೆಯಾಯಿತು. ಬ್ರಹ್ಮಾರವರು - ತನ್ನ ಪಾತ್ರವನ್ನಭಿನಯಿಸಿ ಬ್ರಾಹ್ಮಣರಿಗೆ ಯಜ್ಞದ ಜವಾಬ್ದಾರಿಯನ್ನಂತು ಕೊಟ್ಟರು, ಯಜ್ಞದ ವಿಶೇಷ ಪ್ರಸಾದವನ್ನು ಬಾಪ್‌ದಾದಾರವರು ತೆಗೆದುಕೊಳ್ಳುತ್ತಾರೆ. ಮಿಲನ ಮಾಡುವುದಕ್ಕಾಗಿ ಯಾರೇ ಬರುತ್ತಾರೆಂದರೆ, ಅವರಿಗೆ ಪ್ರಸಾದವನ್ನು ಕೊಡುತ್ತೀರಲ್ಲವೆ. ಬಾಪ್‌ದಾದಾರವರೂ ಸಹ ಅನುಗ್ರಹವನ್ನು ತೆಗೆದುಕೊಂಡು ಹೋಗುತ್ತಾರೆ. ಈ ಪ್ರಸಾದವನ್ನು ಕೊಡುವುದು ಅರ್ಥಾತ್ ವಿಶ್ವ ಪರಿವರ್ತನೆಯಾಗುವುದು. ಈ ಶಿವರಾತ್ರಿಯಲ್ಲಿ ಸೇವೆಯ ಸಾಧನಗಳಿಂದ, ಅನ್ಯ ಅನೇಕ ಆತ್ಮರಿಗೆ ಪರಿಚಯ ಸಿಗಲಿ. ಅದನ್ನಂತು ಮಾಡುತ್ತಿರುತ್ತೀರಿ ಆದರೆ ಜೊತೆಜೊತೆಗೆ ಇಂತಹ ಸಂಕಲ್ಪ ಮಾಡಿರಿ- ಪರಿಚಯದ ಜೊತೆಯಲ್ಲಿ ತಂದೆಯ ಹೊಳಪನ್ನು ನೋಡುವ ಅಥವಾ ಅನುಭವ ಮಾಡುವ ಪ್ರಸಾದವನ್ನೂ ತೆಗೆದುಕೊಳ್ಳಲಿ. ಹೇಗೆ ಯಾವುದೇ ಕಾರ್ಯಕ್ರಮ ಮುಂತಾದವು ಆಗುತ್ತದೆಯೆಂದರೆ ಎಲ್ಲಿ ಪ್ರಸಾದವು ಸಿಗುತ್ತದೆಯೋ ಅಲ್ಲಿ ಎಲ್ಲರಿಗೂ ಅಕರ್ಷಣೆಯಾಗುತ್ತದೆ. ಬಯಸದಿದ್ದರೂ ಸಹ ಸ್ವತಹವಾಗಿಯೇ ಪ್ರಸಾದದ ಅಕರ್ಷಣೆಯಿಂದ ಜನರು ಬಂದು ಬಿಡುತ್ತಾರೆ. ಅಂದಮೇಲೆ ಇಂತಹ ಲಕ್ಷ್ಯವನ್ನಿಡಿ, ವಾಯುಮಂಡಲವನ್ನು ರೂಪಿಸಿರಿ- ವಿಶೇಷವಾಗಿ ತಮ್ಮ ಸಮರ್ಥತೆಯ ಆಧಾರದ ಮೇಲೆ, ದಯಾಸಂಕಲ್ಪದ ಆಕರ್ಷಣೆಯಿಂದ ಅಸಮರ್ಥ ಆತ್ಮರಿಗೆ ಪ್ರಾಪ್ತಿ ಅಥವಾ ಅನುಭೂತಿಯ ಪ್ರಸಾದವನ್ನು ಹಂಚೋಣ. ಜೊತೆಜೊತೆಯಲ್ಲಿ ತಾವು ಮಹಾವೀರರ ವಿಶೇಷ ಗ್ರೂಪ್ ಅನ್ನು ಮಾಡಿರಿ, ಅದರಿಂದ ಧೃಡಸಂಕಲ್ಪದ ಮೂಲಕ ತಿಳಿದಿರುವವರು ಮತ್ತು ಮಾಡುವವರ ಸಾಕ್ಷಾತ್ ಸ್ವರೂಪದವರಾಗಿ ಮಾಡಿತೋರಿಸಿರಿ. ಹೇಗೆ ಹೇಳಿಕೆಯಿದೆ – ಧರಣಿ ಬಾಯ್ಬಿಟ್ಟರೂ ಧರ್ಮವನ್ನು ಬಿಡಬಾರದು. ಇಂತಹ ಧಾರಣೆಯಿರಲಿ - ಎಂತಹ ಪರಿಸ್ಥಿತಿಯೇ ಬರಲಿ, ಮಾಯೆಯು ಮಹಾವೀರನ ರೂಪವೇ ಮುಂದೆಬರಲಿ ಆದರೆ ಧಾರಣೆಯನ್ನು ಬಿಡುವುದಿಲ್ಲ. ಹೇಗೆ ಪ್ರಾರಂಭದಲ್ಲಿ ಪರಸ್ಪರದಲ್ಲಿ ಪುರುಷಾರ್ಥದ ಗ್ರೂಪ್ ಮಾಡಿದ್ದಿರಲ್ಲವೆ. ದೈವೀ ಏಕತೆಯನ್ನೂ ಮಾಡಲಾಯಿತು, ಈಗ ಯಾವ ಪಾರ್ಟಿಯನ್ನು ಮಾಡುತ್ತೀರಿ?ಈ ಶಿವರಾತ್ರಿಯಲ್ಲಿ ಪಾಂಡವರು ಮತ್ತು ಶಕ್ತಿಯರಿಬ್ಬರೂ ವಿಶೇಷವಾಗಿ ಗ್ರೂಪ್ ಮಾಡಿರಿ, ಅದು ವಿಘ್ನವಿನಾಶಕ ಗ್ರೂಪ್ ಆಗಿರಲಿ. ಈ ಪ್ರಸಾದವನ್ನು ಬಾಪ್‌ದಾದಾರವರು ತೆಗೆದುಕೊಂಡು ಹೋಗುತ್ತಾರೆ. ದೂರದವರೆಗೂ ಯಜ್ಞದ ಆಹುತಿಯ ಸುಗಂಧವು ಹರಡುತ್ತದೆಯೆಂದರೆ ಈ ವಿಶೇಷವಾದ ಸುಗಂಧದ ಖುಷಿಯ ಸಮಾಚಾರವನ್ನು ಬಾಪ್‌ದಾದಾರವರೂ ಸಹ ಸಾಕಾರ ವತನದಿಂದ ಸೂಕ್ಷ್ಮ ವತನದವರೆಗೂ ತೆಗೆದುಕೊಂಡು ಹೋಗುತ್ತಾರೆ ಇಂತಹ ಪ್ರಸಾದವನ್ನು ತಯಾರು ಮಾಡಿರಿ- ಜೊತೆಯಲ್ಲಿ ಸ್ವಲ್ಪ ತೆಗೆದುಕೊಂಡೂ ಹೋಗುತ್ತಾರೆ. ಇದೇ ಆಹುತಿಯು ಹೋಗುವಂತಹ ಗೇಟ್‌ನ್ನೂ ತೆರೆಯುತ್ತದೆ. ಈಗ ಇಷ್ಟೊಂದು ಸಂಖ್ಯೆಯ ವೃತ್ತಿಯನ್ನು ಪಡೆದುಕೊಂಡಿದೆಯೆಂದರೆ ಹೋಗುವ ಗೇಟ್‌ನ್ನು ತೆರೆಯುವುದಕ್ಕಾಗಿ. ಅಂದಮೇಲೆ ಗೇಟ್ ತೆರೆಯಲು ಯಾರು ನಿಮಿತ್ತರಾಗುತ್ತಾರೆ? ಒಂಟಿ ತಂದೆಯೇನನ್ನೂ ಮಾಡುವುದಿಲ್ಲ. ಯಾವಾಗ ಏನಾದರೂ ಮಾಡಿದ್ದಾರೆಯೇ? ಈಗಲೂ ಸಹ ಒಂಟಿಯಾಗಿಲ್ಲ (ಮಕ್ಕಳ ವಾರ್ತಾಲಾಪ ನಡೆಯುತ್ತಿದೆ ಏನೆಂದರೆ – ಬಾಬಾ, ತಾವು ಒಂಟಿಯಾಗಿ ಹೊರಟುಹೋದಿರಿ) ಮೊದಲಂತು ಬಾಪ್‌ದಾದಾ ಇಬ್ಬರೂ ಜೊತೆಯಿದ್ದರು. ಒಂಟಿಯಂತು ಇರಲು ಸಾಧ್ಯವಿಲ್ಲ, ಮಕ್ಕಳು ಸಹ ಇದ್ದೀರಿ- ತಾವು ಜೊತೆಯಿರುವುದಿಲ್ಲವೇ? ಏನೆಂದು ಪ್ರತಿಜ್ಞೆ ಮಾಡಿದ್ದೀರಿ. ಜೊತೆಯಲ್ಲಿರುತ್ತೇವೆ, ಜೊತೆಯಲ್ಲಿ ನಡೆಯುತ್ತೇವೆ, ಜೊತೆಯಲ್ಲಿ ಕುಡಿಯುತ್ತೇವೆ- ಈ ಪ್ರತಿಜ್ಞೆಯಿದೆಯಲ್ಲವೆ. ಈಗ ಪ್ರಜ್ಞೆಯು ಬದಲಾಯಿತೆ? ಈಗಲೂ ಸಹ ಅದೇ ಪ್ರತಿಜ್ಞೆಯಿದೆ, ಬದಲಾಯಿಸಿಲ್ಲ. ಹೊರಟುಹೋದರು ಎನ್ನಬಾರದು. ಸಾಕಾರದಲ್ಲಂತು ಆದರೂ ಸಹ ಸ್ವಲ್ಪಸಮಯದಲ್ಲಿ ಸಾಕಾರನು ಜೊತೆಯಿದ್ದರು ಮತ್ತು ಸ್ವಲ್ಪ ಮಂದಿಗಾಗಿ ಸಾಕಾರದ ಜೊತೆಯಿದ್ದರು. ಈಗಂತು ಎಲ್ಲರ ಜೊತೆಯಿದ್ದಾರೆ. ಸಾಕಾರದಲ್ಲಂತು ಕೆಲವುಪ್ರಕಾರದ ಬಂಧನಗಳಿದ್ದವು. ಈಗಂತು

ನಿರ್ಬಂಧನವಾಗಿದ್ದಾರೆ. ಈಗಂತು ಇನ್ನೂ ತೀವ್ರಗತಿಯಿದೆ- ಬಾಬಾರವರನ್ನು ಕರೆದಿರಿ ಮತ್ತು ಪ್ರಭು ಹಾಜರ್ ಆಗಿಬಿಡುತ್ತಾರೆ. ಯಾವಾಗ ಬಲಿಹಾರಿಯಾಗಿ ಬಿಡುತ್ತೀರೆಂದರೆ ಮೋಹವಂತು ಅದರಲ್ಲಿ ಒಂದು ಹನಿಯಾಗಿದೆ. ಈಗ ಜೊತೆಯಿರುತ್ತೇವೆ, ಜೊತೆಯಲ್ಲಿ ನಡೆಯುತ್ತೇವೆ. ಕೇವಲ ಇಂದಿನ ದಿನವೇಕೆ! ಸದಾಕಾಲ ಜೊತೆಯಲ್ಲಿಯೇ ನಡೆಯುತ್ತೇವೆ. ಒಳ್ಳೆಯದು - ಈಗ ಪ್ರಸಾದವನ್ನಂತು ತಯಾರಿ ಮಾಡಿರಿ: ಪಾಂಡವರು ಏನು ಮಾಡುವಿರಿ? (ಬಕರಿ ಇದ್) ಏನಾದರೂ ಮಾಡಿ ಆದರೆ ಸ್ವಲ್ಪ ಏನಾದರೂ ಮಾಡಿತೋರಿಸಿರಿ. ಪಾಂಡವರ ಗ್ರೂಪ್ ರೇಸ್ ಮಾಡುತ್ತದೆಯೋ ಅಥವಾ ಶಕ್ತಿಯರು ಮಾಡುತ್ತೀರಾ ಎಂದು ನೋಡುತ್ತೇವೆ. ಕುರಿಯ ಈದ್ ಮಾಡಿರಿ ಅಥವಾ ಯಾವುದೇ ಈದ್ ಆಚರಿಸಿರಿ. ನಾನು-ನಾನು ಎನ್ನುವುದರ ತ್ಯಾಗ ಮಾಡುವುದಕ್ಕೆ ಹೇಳಲಾಗುತ್ತದೆ. ಈದ್ ಆಚರಿಸುವುದು. ಈಗ ಯಾವ ಪ್ರಸಾದವು ತಯಾರಾಗಿ ಬಿಡುತ್ತದೆಯೆಂದು ನೋಡುತ್ತೇವೆ. ಪಾಂಡವರು ತಯಾರು ಮಾಡುತ್ತೀರಾ ಅಥವಾ ಶಕ್ತಿಯರು ತಯಾರು ಮಾಡುತ್ತೀರಾ ಅಥವಾ ಇಬ್ಬರೂ ತಯಾರು ಮಾಡುತ್ತೀರಾ! ಒಳ್ಳೆಯದು- ಯು.ಪಿ. ಜೋನ್ ವಿಶೇಷವಾಗಿ ಭಾಗ್ಯಶಾಲಿಯಾಗಿದೆ-ಯು.ಪಿ.ಯ ವಿಶೇಷತೆಯಾಗಿದೆ - "ಭಾವನೆಯಿರುವಂತಹ ಧರಣಿ ಯಾಗಿದೆ. ಭಕ್ತಿಯ ಭಾವನೆಯು ಹೆಚ್ಚಿನದಾಗಿದೆ. ಇಂತಹ ಭಕ್ತಿಯ ಧರಣಿಗೆ ಭಕ್ತಿಯ ಫಲವನ್ನು ಕೊಡಲು ನಿಮಿತ್ತರಾಗಿದ್ದೀರಿ. ಎಲ್ಲಾ ಜೋನಿಗಿಂತಲೂ ಈ ಯು.ಪಿ.ಯ ನೆನಪಾರ್ಥವು ಬಹಳ ಇದೆ ಆದ್ದರಿಂದ ಯು.ಪಿಯ ಧರಣಿಗೆ ನೆನಪಾರ್ಥವನ್ನು ಮತ್ತೆ ವಿಶೇಷವಾಗಿ ನೆನಪು ಮಾಡಿಸಿರಿ. ಮೊದಲಿನ ಹೂಗುಚ್ಛವನ್ನು ಯು.ಪಿ..ಯ ವಿಸ್ತಾರವು ಬಹಳಷ್ಟಿದೆ. ವಿಸ್ತಾರದಿಂದ ತಮ್ಮ ಜ್ಞಾನದ ಬೀಜವನ್ನು ಬಿತ್ತನೆ ಮಾಡಿ, ತಂದೆಯ ಮಕ್ಕಳನ್ನು ಅತ್ಯಧಿಕವಾಗಿ ತಯಾರು ಮಾಡಿರಿ. ಹಾಗೆ ನೋಡುವುದಾದರೆ ಯು.ಪಿ.ಯ ಧರಣಿಯು ಫಲೀಭೂತವಾಗಿರುವ ಧರಣಿಯಾಗಿದೆ ಆದ್ದರಿಂದ ಹೂಗುಚ್ಛವು ಅತ್ಯಧಿಕವಾಗಿ ವೃದ್ಧಿಯಾಗಲು ಸಾಧ್ಯವಿದೆ- ಪ್ರತಿಯೊಂದು ಸ್ಥಾನದಿಂದಲೂ ಜ್ಞಾನಗಂಗೆಯು ಹರಿಯುತ್ತಾ ಸಾಗಲಿ, ನದಿಯ ಮಹತ್ತಿಕೆಯೂ ಸಹ ಯು.ಪಿ.ಯಲ್ಲಿ ಸ್ನಾನ ಮಾಡುವುದರ ಮಹತ್ತಿಕೆಯೂ ಇದೆ. ಹೇಗೆ ಸ್ಥೂಲಸ್ನಾನದ ಮಹತ್ವಿಕೆಯಿದೆಯೋ ಅದೇರೀತಿ ನಾಲ್ಕೂಕಡೆಯಲ್ಲಿ ಜ್ಞಾನಸ್ನಾನದ ಮಹತ್ವಿಕೆಯನ್ನು ವೃದ್ಧಿ ಮಾಡಿರಿ. ಯು.ಪಿ.ಯ ಮಹತ್ತಿಕೆಯಿದೆ. ಮಹಾನ್ ಆಗಿದೆಯಲ್ಲವೆ. ನಿಯಮ ಪೂರ್ವಕವಾಗಿ ಜ್ಞಾನದ ತೀರ್ಥಸ್ಥಾನ, ಮುಂತಾದವೂ ಸಹ ಯು.ಪಿ.ಯಿಂದಲೇ ಆಗಿದೆ. ನಿಯಮ ಪೂರ್ವಕವಾದ ನಿಮಂತ್ರಣಾರ್ಥವಾಗಿ ಕಾನ್ಪುರ ಮತ್ತು ಲಕ್ನೌದ ಆತ್ಮರು ನಿಮಿತ್ತರಾಗಿದ್ದರು. ದೆಹಲಿಯಲ್ಲಿ ಕೇವಲ ಮಾತೆಯರ ನಿಮಂತ್ರಣವಿತ್ತು- ನಿಯಮ ಪೂರ್ವಕವಾದ ನಿಮಂತ್ರಣವು ಕಾನ್ಪುರ ಮತ್ತು ಲಕ್ನೌದಾಗಿತ್ತು. ದೆಹಲಿಯ ಮಹಿಮೆಯು ತನ್ನದಾಗಿದೆ, ಯು.ಪಿ.ಯ ಮಹಿಮೆಯು ತನ್ನದಾಗಿದೆ. ಮಹಾನತೆಯಂತು ಬಹಳ ಇದೆ, ಈಗ ಮಹಾನತೆಯ ಮಹಿಮೆಯನ್ನು ಎಷ್ಟು ಮಾಡಲಾಗಿದೆಯೋ ಅದರನುಸಾರವಾಗಿಯೇ ಮಹಾನ್ ಕಾರ್ಯವನ್ನು ಮಾಡಿ ತೋರಿಸಿರಿ. ಇಂತಹ ವಿಶೇಷ ಕಾರ್ಯವನ್ನು ಮಾಡಿರಿ ಅದನ್ನು ಈಗಿನವರೆಗೂ ಯಾವುದೇ ಜೋನ್‌ನಿಂದಲೂ ಮಾಡಲಾಗಿಲ್ಲ. ಈಗ ಪ್ರತಿಯೊಂದು ಜೋನಿನವರೂ ಸಹ ಯಾವುದಾದರೂ ಹೊಸ ಅನ್ವೇಷಣೆ ಗಳನ್ನು ರಚಿಸಬೇಕಾಗಿದೆ. ಮೇಳಾ ಆಯಿತು, ಸಮ್ಮೇಳನವೂ ಆಯಿತು, ಈಗ ಯಾವುದಾದರೂ ಹೊಸ ರೂಪರೇಖೆಗಳನ್ನು ಮಾಡಿರಿ, ಅದನ್ನು ನೋಡಿ-ಕೇಳಿದವರು ತಿಳಿದುಕೊಳ್ಳಲಿ- ಇಂತಹದ್ದನ್ನು ನಾವು ಎಂದೂ ಕೇಳಿಲ್ಲ ಮತ್ತು ನೋಡಿಲ್ಲ.

**ಆಗ್ರಾ ಜೋನ್‌ನೊಂದಿಗೆ ವಾರ್ತಾಲಾಪ**:- ಸದಾ ತಮ್ಮ ಭಾಗ್ಯದ ಸ್ಮರಣೆಯನ್ನು ಮಾಡುತ್ತಾ ಖುಷಿ ಯಲ್ಲಿರುತ್ತೀರಾ? ವಾಹ್ ನನ್ನ ಭಾಗ್ಯವೇ! ಈ ಗೀತೆಯು ಸದಾ ಮನಸ್ಸಿನಲ್ಲಿ ಮೊಳಗುತ್ತಿರುತ್ತದೆಯೇ? ವಾಹ್ ಬಾಬಾ, ವಾಹ್ ಡ್ರಾಮಾ ಮತ್ತು ವಾಹ್ ನನ್ನ ಪಾತ್ರವೇ ಸದಾ ಇದೇ ಸ್ಮೃತಿಯಲ್ಲಿದ್ದು, ಪ್ರತಿಯೊಂದು ಕಾರ್ಯವನ್ನು ಮಾಡುತ್ತಾ, ಇಂತಹ ಅನುಭವವಾಗುತ್ತದೆಯೇ- ಹೇಗೆ ಕರ್ಮವನ್ನು ಮಾಡುತ್ತಿದ್ದರೂ ಸಹ ಕರ್ಮದ ಬಂಧನದಿಂದ ಮುಕ್ತ ಸದಾ ಜೀವನ್ಮುಕ್ತರಾಗಿದ್ದೇವೆ. ಸತ್ಯಯುಗದ ಜೀವನ್ಮುಕ್ತಿಯ ಆಸ್ತಿಯಂತು ಪ್ರಾಪ್ತಿಯಾಗುತ್ತದೆ. ಆದರೆ ಈಗಿನ ಜೀವನಬಂಧನದಿಂದ ಜೀವನ್ಮುಕ್ತ ಸ್ಥಿತಿಯ ಅನುಭವವು– ಸತ್ಯಯುಗಕ್ಕಿಂತಲೂ ಶ್ರೇಷ್ಠವಾಗಿದೆ. ಅಂದಮೇಲೆ ಈಗಲೂ ಸಹ ತಮ್ಮ ಜ್ಞಾನ ಮತ್ತು ಯೋಗದ ಶಕ್ತಿಯಿಂದ ಜೀವನ್ಮುಕ್ತ ಸ್ಥಿತಿಯ ಅನುಭವ ಮಾಡುತ್ತೀರಾ ಅಥವಾ ಈಗಲೂ ಬಂಧನವಿದೆಯೇ? ಬಂಧನಗಳೆಲ್ಲವೂ ಸಮಾಪ್ತಿಯಾಯಿತು ಮತ್ತು ಜೀವನ್ಮುಕ್ತರಾಗಿದ್ದೀರಾ. ಏನಾದರೂ ಆಗಲಿ ಆದರೆ ಜೀವನ್ಮುಕ್ತರಾಗಿರುವ ಕಾರಣದಿಂದ ಇಂತಹ ಅನುಭವವಾಗುತ್ತದೆ- ಹೇಗೆ ಒಂದು ಆಟವನ್ನು ಆಡುತ್ತಿದ್ದೇವೆ, ಅದು ಪರೀಕ್ಷೆಯಲ್ಲ ಆದರೆ

ಆಟವಾಗಿದೆ. ತನುವಿನ ರೋಗ ಆಗಬಹುದು- ಮಾಯೆಯ ಅನೇಕ ಪ್ರಕಾರದ ಯುದ್ಧವೇ ಆಗಲಿ ಆದರೆ ಆಟದ ಅನುಭವವಾಗಲಿ, ಆಟದಲ್ಲಿ ದುಃಖವಾಗುವುದಿಲ್ಲ. ಆಟವನ್ನು ಆಡುವುದೇ ಮನೋರಂಜನೆಗಾಗಿ, ದುಃಖಕ್ಕಾಗಿ ಆಡುವುದಿಲ್ಲ. ಅಂದಮೇಲೆ ಆಟವೆಂದು ತಿಳಿಯುವುದರಿಂದ ಜೀವನ್ಮುಕ್ತ ಸ್ಥಿತಿಯ ಅನುಭವ ಮಾಡುತ್ತೀರಿ. ಜೀವನ್ಮುಕ್ತರಾಗಿದ್ದೀರಾ ಅಥವಾ ಜೀವನ ಬಂಧನವಿದೆಯೇ? ಶರೀರದ, ಸಂಬಂಧದ, ಯಾವುದೇ ಬಂಧವಿಲ್ಲವೇ, ಇದಂತು ಆಟ-ಆಡುವುದರಲ್ಲಿ ಕರ್ತವ್ಯ ಪರಿಪಾಲನೆಯನ್ನು ನಿಭಾಯಿಸುತ್ತಿದ್ದೀರಿ. ಕರ್ತವ್ಯ ಪರಿಪಾಲನೆಯ ಆಟವನ್ನೂ ಆಡುತ್ತಿದ್ದೀರಿ. ನಿರ್ಬಂಧನ ಆತ್ಮರೇ ಶ್ರೇಷ್ಠಸ್ಥಿತಿಯ ಅನುಭವ ಮಾಡಬಹುದು. ಬಂಧನದಲ್ಲಿರುವವರು ಕೆಳಗೆ ಬಂಧಿತರಾಗಿರುತ್ತಾರೆ, ನಿರ್ಬಂಧನರು ಮೇಲೆ ಹಾರುತ್ತಾರೆ. ಎಲ್ಲರೂ ತಮ್ಮ ಪಂಜರವನ್ನು ಮುರಿದುಬಿಟ್ಟಿದ್ದೀರಾ. ಬಂಧನವೇ ಪಂಜರವಾಗಿದೆ ಆದ್ದರಿಂದ ಬಂಧನಗಳ ಪಂಜರವನ್ನು ಮುರಿದುಬಿಟ್ಟಿದ್ದೀರಿ. ಕರ್ತವ್ಯ ಪರಿಪಾಲನೆಯನ್ನೂ ಸಹ ನಿಮಿತ್ತ ಮಾತ್ರದಲ್ಲಿ ನಿಭಾಯಿಸಬೇಕು, ಸೆಳೆತದಿಂದಲ್ಲ, ಆನಂತರ ನಿರ್ಬಂಧನ ಎಂದು ಹೇಳಲಾಗುತ್ತದೆ. ನಿಮಿತ್ತರಾಗಿದ್ದು ನಡೆಯುತ್ತೀರೆಂದರೆ ನಿರ್ಬಂಧನವಾಗಿದ್ದೀರಿ. ಯಾವುದೇ ನನ್ನತನವಿದೆಯೆಂದರೆ ಪಂಜರದಲ್ಲಿ ಬಂಧಿತರಾಗಿದ್ದೀರಿ. ಈಗ ಪಂಜರದ ಪಕ್ಷಿಯಲ್ಲ, ಸ್ವರ್ಗದ ಪಕ್ಷಿಯಾಗಿ ಬಿಟ್ಟಿದ್ದೀರಿ. ಪ್ರಾರಂಭದಲ್ಲಿನ ಗೀತೆಯಿದೆಯಲ್ಲವೆ-ಪಂಜರದ ಪಕ್ಷಿಯೇ ಈಗಂತು ಸ್ವರ್ಗದ ಪರಿಯಾಗಿ ಬಿಟ್ಟಿದ್ದೀರಿ, ಎಲ್ಲರೂ ಸ್ವರ್ಗದಲ್ಲಿ ಹಾರುವವರಾಗಿದ್ದೀರಿ. ಪಂಜರದ ಪಕ್ಷಿಯಿಂದ ಫರಿಯಾಗಿ ಬಿಟ್ಟಿದ್ದೀರಿ. ವರ್ತಮಾನದಲ್ಲಿ ಈಗ ಎಲ್ಲಿಯೂ, ಸ್ವಲ್ಪವೂ ಬಂಧನವಿರಬಾರದು. ಮನಸ್ಸಿನ ಬಂಧನವೂ ಇರಬಾರದು. ಏನು ಮಾಡಲಿ, ಹೇಗೆ ಮಾಡಲಿ, ಬಯಸುತ್ತೇನೆ. ಆಗುವುದಿಲ್ಲ ಎನ್ನುವುದೂ ಸಹ ಮನಸ್ಸಿನ ಬಂಧನವಾಗಿ ಬಿಡುತ್ತದೆ. ಮಾಡಲು ಬಯಸುತ್ತೇನೆ, ಆದರೆ ಮಾಡಲು ಆಗುತ್ತಿಲ್ಲವೆಂದರೆ ಬಲಹೀನರಾದಿರಲ್ಲವೆ. ಈ ಬಂಧನದಿಂದಲೂ ಮುಕ್ತರಾಗಿರುವವರಿಗೇ ನಿರ್ಬಂಧನರೆಂದು ಹೇಳಲಾಗುತ್ತದೆ. ಯಾವಾಗ ತಂದೆಯ ಮಕ್ಕಳಾದಿರೆಂದರೆ ಮಗು ಅರ್ಥಾತ್ ಸ್ವತಂತ್ರರು. ಆದ್ದರಿಂದ ವಿದ್ಯಾರ್ಥಿ ಜೀವನವು ಅತ್ಯುತ್ತಮ ಜೀವನವಾಗಿದೆ ಎಂದು ಹೇಳಲಾಗುತ್ತದೆ. ಅಂದಮೇಲೆ ತಾವು ಎಲ್ಲರೂ ಮಕ್ಕಳಾಗಿದ್ದೀರಾ ಅಥವಾ ವೃದ್ಧರೇ? ಮಗು ಅರ್ಥಾತ್ ನಿರ್ಬಂಧನರು. ಒಂದು ವೇಳೆ ತಮ್ಮನ್ನು ಹಿಂದಿನ ಜೀವನದವರೆಂದು ತಿಳಿಯುತ್ತೀರೆಂದರೆ ಬಂಧನವಿದೆ, ಮರುಜೀವಾ ಆಗಿದ್ದೀರೆಂದರೆ ನಿರ್ಬಂಧನರು, ಭಲೆ ಕುಮಾರರಿರಬಹುದು ಅಥವಾ ವಾನಪ್ರಸ್ಥಿಯಾಗಿರಬಹುದು ಆದರೆ ಎಲ್ಲರೂ ಮಕ್ಕಳೇ ಆಗಿದ್ದೀರಿ. ಕೇವಲ ಯಾವ ಒಂದು ಕಾರ್ಯವನ್ನು ಬಾಬಾರವರು ಕೊಟ್ಟಿದ್ದಾರೆ - "ನೆನಪು ಮಾಡಿ ಮತ್ತು ಸೇವೆಯಲ್ಲಿರಿ", ಸದಾ ಇದರಲ್ಲಿಯೇ ವ್ಯಸ್ತರಾಗಿರಬೇಕು.

ಯಾರು ಆದಿಯಿಂದಲೂ ಸ್ಥಾಪನೆಯ ಕಾರ್ಯದಲ್ಲಿ ಸಹ ಯೋಗಿದ್ದೀರಿ, ಅವರಿಗೆ ಡ್ರಾಮಾನುಸಾರ ಅವಶ್ಯವಾಗಿ ಒಂದಲ್ಲ ಒಂದು ರೂಪದಿಂದ, ವಿಶೇಷವಾದ ಸಹಯೋಗವು ಪ್ರಾಪ್ತಿಯಾಗುತ್ತದೆ. ಗ್ಯಾರಂಟಿಯಿದೆ. ಬಾಪ್‌ದಾದಾರವರು ಇಲ್ಲಿನದನ್ನು ಇಲ್ಲಿಯೂ ರಿಟರ್ನ್ ಕೊಡುತ್ತಾರೆ ಮತ್ತು ಭವಿಷ್ಯಕ್ಕಾಗಿಯೂ ಜಮಾ ಆಗುತ್ತದೆ. ಒಳ್ಳೆಯದು-

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 05-12-1978.

***ಮರುಜೀವ ಜನ್ಮದ ನಿಜ ಸಂಸ್ಕಾರ, ಮೊದಲ ಸ್ಮೃತಿ ಮತ್ತು ಮೊದಲ ಮಾತು.***

ಮರುಜೀವ ಜನ್ಮದ ನಿಜ ಸಂಸ್ಕಾರ ಮೊದಲ ಸ್ಮೃತಿ ಮತ್ತು ಮೊದಲ ಮಾತು "ನಾನು ಶ್ರೇಷ್ಠ ಬ್ರಾಹ್ಮಣ ಆತ್ಮನಾಗಿದ್ದೇನೆ", ಇದನ್ನು ಕೂಡ ಮರೆತು ಹೋಗುತ್ತಿದ್ದೀರಿ. ಆದರೆ ಬ್ರಾಹ್ಮಣರು ಅರ್ಥಾತ್ ಸ್ಮೃತಿ ಸ್ವರೂಪರು ಮತ್ತು ಸಮರ್ಥ ಸ್ವರೂಪರು. ಇದನ್ನು ನಿಜ ಸಂಸ್ಕಾರವಾಗಿ ಮಾಡಿಕೊಂಡಾಗ ಸರ್ವ ವಿಘ್ನಗಳಿಂದ, ಸರ್ವ ಪರಿಸ್ಥಿತಿಗಳಿಂದ, ತಮೋಗುಣಿ ಪ್ರಕೃತಿಯ ಆಪತ್ತುಗಳಿಂದ ಒಂದು ಕ್ಷಣದಲ್ಲಿ ವಿಜಯವನ್ನು ಪಡೆಯಬಲ್ಲಿರಿ. ಮರುಜೀವ ಜನ್ಮ ಪಡೆದಾಕ್ಷಣ ದಿವ್ಯ ಶರೀರವನ್ನು ಧರಿಸಿ, ಶೂದ್ರತ್ವದ ಗುರುತುಗಳು, ಅಶುದ್ಧ ವೃತ್ತಿ ಮತ್ತು ದೃಷ್ಟಿಯನ್ನು ಪರಿವರ್ತನೆ ಮಾಡಿಕೊಂಡು ಪವಿತ್ರ ದೃಷ್ಟಿ ಮತ್ತು ವೃತ್ತಿಯ ವಿಶೇಷ ಲಕ್ಷಣಗಳನ್ನು ಧಾರಣೆ ಮಾಡಿದ್ದೀರಿ.

ಒಮ್ಮೆ ಸಂಕಲ್ಪದಿಂದ ತ್ಯಾಗ ಮಾಡಿರುವ ಯಾವ ವಸ್ತುವನ್ನಾದರೂ ಶ್ರೇಷ್ಠ ಆತ್ಮರು ಮತ್ತೆ ಧಾರಣೆ ಮಾಡುವುದಿಲ್ಲ, ಎಂದು ಹೇಳುತ್ತಾ ಶಿವ ಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಮರುಜೀವಾ ಜನ್ಮದ ಮೊದಲ ಸ್ಮೃತಿ, ಮೊದಲ ಮಾತು "ನಾನು ಶ್ರೇಷ್ಠ ಬ್ರಾಹ್ಮಣ ಆತ್ಮನಾಗಿದ್ದೇನೆ" ಇದನ್ನು ಸಂಸ್ಕಾರ ರೂಪದಲ್ಲಿ ತಂದು, ಸರ್ವವಿಘ್ನಗಳಿಂದ ಸರ್ವ ಪರಿಸ್ಥಿತಿಗಳಿಂದ, ತಮೋಗುಣಿ ಪ್ರಕೃತಿಯ ಆಪತ್ತುಗಳಿಂದ ಕ್ಷಣದಲ್ಲಿ ವಿಜಯವನ್ನು ಪಡೆದಿದ್ದೇನೆ.

2. ನಾನು ಸ್ಮೃತಿ ಮತ್ತು ಸಮರ್ಥ ಬ್ರಾಹ್ಮಣ ಸ್ವರೂಪ.

3. ತಂದೆಯವರಾದಾಗಿನಿಂದ, ಮರುಜೀವ ಆದಾಗಿನಿಂದ ನನ್ನ ಮೊದಲ ಪ್ರತಿಜ್ಞೆ - "ಈಶ್ವರೀಯ ಸಂಸ್ಕಾರಗಳೆಂಬ ದಿವ್ಯ ಗುಣಗಳನ್ನು ಧರಿಸಿರುವ ಪವಿತ್ರ ದೃಷ್ಟಿ ಮತ್ತು ವೃತ್ತಿಯ ಶ್ರೇಷ್ಠ ಬ್ರಾಹ್ಮಣ ಆತ್ಮನಾಗಿದ್ದೇನೆ".

4. ನಾನು ಸಂಕಲ್ಪದಿಂದ ತ್ಯಾಗ ಮಾಡಿರುವ ವಿಕಾರಗಳನ್ನು ಸಂಕಲ್ಪದಲ್ಲಿ ಕೂಡ ಸ್ವೀಕರಿಸದ ಶ್ರೇಷ್ಠಾತ್ಮ.

5. ನಾನು ಶ್ರೇಷ್ಠ ಸ್ವರೂಪವಾಗಿ ಸಂಪೂರ್ಣ ಆಹುತಿ ಮಾಡಿ ಸಂಘಟಿತ ರೂಪದಲ್ಲಿ ಪರಿವರ್ತನಾ ಕಾರ್ಯಕ್ರಮದ ದಿನಾಂಕವನ್ನು ನಿರ್ಣಯಿಸಿದ್ದೇನೆ.